**C.mis.1/2024**

PW-1

ದಿನಾಂಕಃ **13.06.2025** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ಹಾಕಿದ್ದ ಅಪೀಲು ಪ್ರಕರಣದ ವಜಾ ಆಗಿದ್ದ ಕಾರಣ ನ್ಯಾಯ ಕೊಡಬೇಕೆಂದು ಈ ಅರ್ಜಿಯನ್ನು ಹಾಕಿದ್ದೇನೆ. ಮೂಲ ದಾವೆ ವಜಾ ಆದ ನಂತರ 2020 ರಲ್ಲಿ ಅಪೀಲು ಸಲ್ಲಿಸಿದ್ದೆ ಎಂದರೆ ಸರಿ. ಅಪೀಲು ಸಲ್ಲಿಸಿದ ನಂತರ 3 ವರ್ಷಗಳ ದೀರ್ಘ ಅವಕಾಶ ಕೊಟ್ಟರೂ ಕೂಡ ನಾವು ವಾದ ಮಂಡನೆ ಮಾಡಲಿಲ್ಲ ಎಂದರೆ ಸಾಕ್ಷಿಯು ನನಗೆ ಹುಷಾರಿರಲಿಲ್ಲ ಎಂದು ಹೇಳುತ್ತಾರೆ. ನಾನು ನ್ಯಾಯಾಲಯಕ್ಕೆ ಬರಲು ಆಗದ ಕಾರಣ ವಕೀಲರಿಗೆ ಮುದ್ದತ್ತು ತೆಗೆದುಕೊಳ್ಳುವಂತೆ ನಾನೇ ಹೇಳಿದ್ದೆ. ಮೂಲ ದಾವೆಯನ್ನು ಮತ್ತು ಅಪೀಲು ಪ್ರಕರಣವನ್ನು ನಡೆಸಲು ನ್ಯಾಯಾಲಯಕ್ಕೆ ನನ್ನ ಅಣ್ಣ ಫಯಾಜ್ ಪಾಷ ಕರೆದುಕೊಂಡು ಬರುತ್ತಿದ್ದರು ಎಂದರೆ ಸರಿ. ಈ ದಿನ ಕೂಡ ಅವರು ನನ್ನ ಜೊತೆ ಬಂದಿದ್ದಾರೆ ಎಂದರೆ ಸರಿ. ನಾನು ಅರ್ಜಿಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆರೋಗ್ಯ ಸರಿ ಇಲ್ಲದೇ ಇರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಬೇಕು ಎಂದರೆ ಕೊಡುತ್ತೇನೆ ಎನ್ನುತ್ತಾರೆ. ಸಾಕ್ಷಿಯು ಮುಂದುವರಿದು ಕಳೆದ ಮೂರು ತಿಂಗಳಿನಿಂದ ನನಗೆ ಹುಷಾರಿರಲಿಲ್ಲ, ಮೊದಲಿಗೆ ನ್ಯಾಯಾಲಯಕ್ಕೆ ಬರುತ್ತಿದ್ದೆ ಎಂದು ಹೇಳುತ್ತಾರೆ. 2 ನೇ ಎದುರುದಾರರಿಗೆ ತೊಂದರೆ ಕೊಡಲು ಸುಳ್ಳು ಅರ್ಜಿಯನ್ನು ಹಾಕಲಾಗಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ**

ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.